ತಳ್ಳುತ್ತಿದ್ದಾರೆ. ದಿನಾಂಕ 9-3-1987ರಂದು ಬಳಕೆದಾರರ ವೇದಿಕೆಯವರು ಪುರಸಭಾಧ್ಯಕ್ಷರಿಗೆ ಪತ್ರ ಬರೆದು ಮೂಡಿನಡಂಬೂರಿನ ಕೆಲವು ಬಾವಿಗಳ ನೀರನ್ನು ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸ ಬಾರದೇಕೆ ಎಂದು ಪ್ರಶ್ನಿಸಿದ್ದು, ಆ ಬಗ್ಗೆ ಪುರಸಭಾಧ್ಯಕ್ಷರು 18-3-1987ರಂದು ಉತ್ತರ ನೀಡಿ ಪುರಸಭಾ ಕಾರ್ಮಿಕರು ಆಗಾಗ್ಗೆ ಹೋಗಿ ತೋಡಿನಲ್ಲಿ ನೀರು ಸರಿಯಾಗಿ ಹರಿದು ಹೋಗುವಂತೆ ಮಾಡುತ್ತಿದ್ದಾರೆ ಎಂದು ತಿಳಿಸಿದ್ದಾರೆ. ಆದರೆ ತೋಡಿನ ನೀರಿನಿಂದ ಅಕ್ಕಪಕ್ಕದ ಬಾವಿಗಳ ನೀರು ಕೆಟ್ಟಿರುವ ಬಗ್ಗೆ ಪುರಸಭಾಧ್ಯಕ್ಷರು ತಮ್ಮ ಉತ್ತರದಲ್ಲಿ ತಿಳಿಸಿರುವುದಿಲ್ಲ. ಆದ್ದರಿಂದ ಹೋಟೆಲಿನ ಕಲುಷಿತ ನೀರು ಹಾಗೂ ಸಾರ್ವಜನಿಕ ಮೂತ್ರಿಯಿಂದ ಬರತಕ್ಕ ಮೂತ್ರ ಇವುಗಳನ್ನು ಮೂಡ ನಿಡಂಬೂರಿನ ತೋಡಿಗೆ ಹರಿಯಲು ಬಿಡುವ ಔಚಿತ್ಯವೇನು ? ಈ ಬಗ್ಗೆ ಸೂಕ್ತ ಕ್ರಮ ಕೈಕೊಂಡು ಕಲುಷಿತ ನೀರು ತೋಡಿಗೆ ಹರಿಯದಂತೆ ಮಾಡಬೇಕೆಂದು ಸಂಬಂಧಪಟ್ಟವರಿಗೆ ನಿರ್ದೇಶಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ಬಗ್ಗೆ ಸ್ಥಳೀಯ ಸಂಸ್ಥೆಯವರಿಗೆ ಸೂಕ್ತ ಕ್ರಮ ತೆಗೆದು ಕೊಳ್ಳುವುದಕ್ಕೆ ಆದೇಶ ನೀಡುತ್ತೇನೆ.

೧೧ ಜಯಪ್ರಕಾಶ್ ಮಾವಿನಕುಳಿಯವರ 'ನಿರಾಕರಣ' ಪುಸ್ತಕ ಧಾರ್ಮಿಕ ಭಾವನೆಗಳನ್ನು ಕೆರಳಿಸಿರುವುದು

ಶ್ರೀ ಬಿ. ಎಂ, ಇದಿನಬ್ಬ (ಉಳ್ಳಾಲ).—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿ ವಿಜಯಾ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ಜಯಪ್ರಕಾಶ ಮಾವಿನಕುಳಿಯವರು ಬರೆದು ಪ್ರಕಟಣೆ ಗೊಳಿಸಿದ "ನಿರಾಕರಣ' ಎಂಬ ನಾಟಕ ಪುಸ್ತಕವು ಇತೀಚೆಗೆ ಬಿಡುಗಡೆಯಾಗಿದೆ. ಈ ನಾಟಕ ಪುಸ್ತಕದಲ್ಲಿ ಮುಸ್ಲಿಮರ ಧಾರ್ಮಿಕ ಭಾವನೆಗಳನ್ನು ಕೆರಳಿಸುವ ಉದ್ರೇಕಿಸುವ, ಅವಹೇಳನ ಮಾಡುವ ವಿಷಯಗಳು ಅಲ್ಲಲ್ಲಿ ಬಂದಿರುವುದು ತಿಳಿದಿದೆ. ಈ ಬಗ್ಗೆ ಅನೇಕ ಮನವಿಗಳು ನನಗೆ ಬಂದಿದೆ. ಈ ಪುಸ್ತಕದಿಂದಾಗಿ ದಕ್ಷಿಣ ಕನ್ನಡದಲ್ಲಿ ಮುಸ್ಲಿಮರಿಗೆ ತುಂಬಾ ನೋವಾಗಿದೆ. ಶಾಂತಿ ಸೌಹಾರ್ದಕ್ಕೆ ತೊಂದರೆ ಒದಗುವ ಭೀತಿ ಇದೆ. ಈ ಬಗ್ಗೆ ದೂರನ್ನು ಅಧಿಕಾರಿಗಳಿಗೆ ಸಲ್ಲಿಸಲಾಗಿದೆ, ಈ ಪುಸ್ತಕದ ಲೇಖಕರ ಮತ್ತು ಪ್ರಕಾಶಕರ ಮತ್ತು ಮುದ್ರಕರ ವಿರುದ್ಧ ನ್ಯಾಯೋಚಿತ ಕ್ರಮವನ್ನು ಸರಕಾರ ತೆಗೆದುಕೊಳ್ಳಬೇಕು. ಲೇಖಕ, ಪ್ರಕಾಶಕ ಮತ್ತು ಮುದ್ರಕರನ್ನು ಬಂಧಿಸಲಾಗಿದೆಯೇ ? ಅವರ ಮೇಲೆ ದಾವೆ ಹೂಡಲಾಗಿದೆಯೇ ? ಪುಸ್ತಕಗಳನ್ನು ಮುಟ್ಟುಗೋಲು ಹಾಕಲಾಗಿದೆಯೇ ? ಈ ಕುರಿತು ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ಬಗ್ಗೆ ಮಾನ್ಯ ಗೃಹ ಸಚಿವರಿಂದ ವರದಿ ತರಿಸಿ ಸನ್ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ.

(ಮಾನ್ಯ ವಿನಯಕುಮಾರ್ ಸೊರಕೆಯವರು ಗೈರುಹಾಜರಾಗಿದ್ದಾರೆ)

೧೨ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ 26 ಮಂದಿ ಪ್ರಾಧ್ಯಾಪಕರುಗಳನ್ನು ಖಾಯಂ ಮಾಡದೇ ಇರುವುದು

ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಮಂಗಳೂರು).—ಮಾನ್ಯ ಅಧ್ಯಕ್ಷರೆ, ಕ್ರಮವಾಗಿ ಸಂದರ್ಶನ ನಡೆಸಿದ್ದು, ಅರ್ಹತೆಯ ಆಧಾರದ ಮೇಲೆ ತಾತ್ಕಾಲಿಕ ಪ್ರಾಧ್ಯಾಪಕರಾಗಿ ನೇಮಕವಾಗಿದ್ದು, ಹುದ್ದೆಯ ಖಾತರಿಯಿಲ್ಲದೆ ವಾರ್ಷಿಕ ಬಡ್ತಿ, ವೈದ್ಯಕೀಯ ಸೌಲಭ್ಯ ಮುಂತಾದ ಸೌಲಭ್ಯಗಳಿಲ್ಲದೆ, ಅವರ ಕಾರ್ಯದಲ್ಲಿ ಯಾವುದೇ ರೀತಿಯ ಒತ್ತಡ ಬಂದರೂ ಗಮನಿಸದೆ, ಮೇಲಧಿಕಾರಿಗಳಿಗೆ ನಿಷ್ಠೆಯಿಂದಿದ್ದು ತಾತ್ಕಾಲಿಕ ಪ್ರಾಧ್ಯಾಪಕರಾಗಿಯೇ ಸ್ವಷ್ಟ ಹುದ್ದೆಗಳಲ್ಲಿ ಕೆಲಸ ಮಾಡುತ್ತಿರುವ 26 ಮಂದಿ ಪ್ರಾಧ್ಯಾಪಕರುಗಳನ್ನು ಮಂಗಳೂರು ವಿಶ್ವವಿದ್ಯಾನಿಲಯದವರು ಹಾಗೆಯೆ ಮುಂದುವರಿಸಿದ್ದು ಅವರನ್ನು ಖಾಯಂ ಮಾಡುವಂತೆ ಕೋರಿ ಮಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಸಂಘ ವಿಶ್ವವಿದ್ಯಾನಿಲಯವನ್ನು ಕೋರಿದ್ದಾಗ್ಯೂ ಅವರ ಬೇಡಿಕೆ ಈಡೇರಿರು

ವುದಿಲ್ಲ. ೨-೭-೮೬ನೇ ಸರಕಾರಿ ಆದೇಶದ ಮೇರೆಗೆ ಸ್ಥಳೀಯ ಅಭ್ಯರ್ಥಿಗಳನ್ನು ಖಾಯಂ ಗೊಳಿಸಲಾಗಿದೆ. ಆಗಸ್ಟ್ ೧೯೮೬ರಲ್ಲಿ ಭಾರತದ ಉಚ್ಚ ನ್ಯಾಯಾಲಯ ಕಿರಿಯ ಕಾಲೇಜುಗಳ ಕಾಂಟ್ರಾಕ್ಟ್ ಲೆಕ್ಚರರುಗಳ ಸೇವೆಗಳನ್ನು ಕ್ರಮಗೊಳಿಸಲಾಗಿದೆ, ೨-೭-೮೬ರ ಸರಕಾರಿ ಆದೇಶದ ಪ್ರಕಾರ ಮೈಸೂರು ವಿಶ್ವವಿದ್ಯಾನಿಲಯದಲ್ಲಿರುವ ತಾತ್ಕಾಲಿಕ ಪ್ರಾಧ್ಯಾಪಕರುಗಳನ್ನು ಸಕ್ರಮ ಗೊಳಿಸುವ ಬಗ್ಗೆ ಕರ್ನಾಟಕ ರಾಜ್ಯದ ವಿಶ್ವವಿದ್ಯಾನಿಲಯಗಳ ಶಾಸನಕ್ಕೆ ತಿದ್ದುಪಡಿ ತರಬೇಕೆಂದು ಮೈಸೂರು ವಿಶ್ವವಿದ್ಯಾನಿಲಯ ಸಿಂಡಿಕೇಟ್ ಸಭೆಯಲ್ಲಿ ೧೯-೮-೮೬ರಂದು ಸರಕಾರಕ್ಕೆ ಮನವಿ ಸಲ್ಲಿಸ ಬೇಕೆಂದು ತೀರ್ಮಾನಿಸಲಾಗಿತ್ತು. ಬೆಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯಲ್ಲಿ ತಾತ್ಕಾಲಿಕ ಪ್ರಾಧ್ಯಾಪಕರುಗಳನ್ನು ಖಾಯಂಗೊಳಿಸಿಂವ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ ಯೆಂದು ಇತ್ತೀಚೆಗೆ ವರದಿಯಾಗಿದೆ. ಇದರಂತೆ ಇಲ್ಲಿಯೂ ಕ್ರಮ ತೆಗೆದುಕೊಳ್ಳಲು ಇರುವ ತೊಂದರೆ ಏನು ?

ಶ್ರೀ ಎ. ಲಕ್ಷ್ಮೀಸಾಗರ್.—ವಿದ್ಯಾಮಂತ್ರಿಗಳಿಂದ ವರದಿ ತರಿಸಿ, ಕ್ರಮ ತೆಗೆದುಕೊಳ್ಳಲಾಗುವುದು

೧೩. ಮೈಸೂರು ನಗರದ ವಿಜಯನಗರ ಬಡಾವಣೆಗೆ ಸೇರಿದ ಹಿಣಕಲ್ ಗ್ರಾಮದ ಸರ್ವೆ ನಂಬರ್ ೫೪ನ್ನು ಮೈಸೂರು ನಗರಾಭಿವೃದ್ಧಿ ಮಂಡಲಿಯವರು ಅಕ್ರಮವಾಗಿ ಹಂಚಿಕೆ ಮಾಡಿರುವುದು

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಮೈಸೂರು ನಗರದ ವಿಜಯನಗರ ಬಡಾವಣೆಗೆ ಸೇರಿದ ಹಿಣಕಲ್ ಗ್ರಾಮದ ಸರ್ವೆ ನಂ. ೫೪ರಲ್ಲಿನ ೫ ಎಕರೆ ಜಮೀನನ್ನು ಮೈಸೂರು ನಗರಾಭಿವೃದ್ಧಿ ಮಂಡಲಿಯವರು ವಶಪಡಿಸಿಕೊಂಡಿದ್ದು, ಆ ಪೈಕಿ ಸುಮಾರು ಒಂದು ಎಕರೆ ಜಮೀನನ್ನು ಮನೆ ಎಂಬುದಾಗಿ ಸುಳ್ಳುಪತ್ರ ಬರೆದು ಬೆಂಗಳೂರು ನಿವಾಸಿಗಳಾದ ಮೂರು ಮಂದಿಗೆ ಸದರಿ ಒಂದುಎಕರೆ ಜಮೀನನ್ನು ನಗರ ಭೂಮಿತಿ ಕಾಯಿದೆಯನ್ನು ಮೀರಿ ರಿಜಿಸ್ಟರ್ ಮಾಡಿಸಿಕೊಡುವ ಸಂದರ್ಭದಲ್ಲಿ ಅಲ್ಲಿದ್ದ ಗ್ರಾಮಲೆಕ್ಕಿಗರಾದ ಶ್ರೀ ಯೋಹನ ಎಂಬುವರು ಜಮೀನಿನ ಬದಲು ಮನೆ ಎಂಬುದಾಗಿ ತಿದ್ದಲು ಅನುಮತಿಸದಿದ್ದ ಪ್ರಯುಕ್ತ ತಪ್ಪು ಕೆಲಸವನ್ನು ಪೂರೈಸಿ ಕೊಳ್ಳುವ ಉದ್ದೇಶದಿಂದ ಅವರನ್ನು ಬೇರೆ ಕಡೆಗೆ ವರ್ಗ ಮಾಡಿಸಿ ಅವರ ಸ್ಥಾನಕ್ಕೆ ಒಂದೇ ವರ್ಷ ವಯಸ್ಸಿನ ಒಂದೇ ಮಗುವನ್ನು ಹೊಂದಿದ್ದ ಶ್ರೀಮತಿ ಹೇಮ ಎಂಬುವರಿಂದ ಮುಖ್ಯಮಂತ್ರಿ ಯವರಿಗೆ ಪತ್ರ ಬರೆಸಿ, ಎಲ್ಲಾ ಮಕ್ಕಳೂ ಶಾಲೆಯಲ್ಲಿ ಓದುತ್ತಿರುವುದಾಗಿ ಸುಳ್ಳು ಅರ್ಜಿ ಸಲ್ಲಿಸಿದ್ದು ಶ್ರೀನಿವಾಸನ್ ಎಂಬುವರನ್ನು ಹಿಣಕಲ್ ಗ್ರಾಮಕ್ಕೆ ಗ್ರಾಮಲೆಕ್ಕಿಗರಾಗಿ ವರ್ಗಾಯಿಸಿ ಮೇಲ್ಕಂಡ ಪತ್ರವನ್ನು ೫೬೧.೫೬೨ ನೇ ಸಂಖ್ಯೆಯಲ್ಲಿ ಮೈಸೂರು ತಾಲ್ಲೂಕು ಸಬ್ ರಿಜಿಸ್ಟ್ರಾರ್ ಅವರ ಕಛೇರಿಯಲ್ಲಿ ರಿಜಿಸ್ಟರ್ ಮಾಡಿಸಿದ್ದಾರೆ. ವರ್ಗಾವಣೆ ವಿಷಯವನ್ನು ರಾಜ್ಯದ ಉಚ್ಚನ್ಯಾಯಾಲಯ ದಲ್ಲಿ ಶ್ರೀ ಯೋಹನ ಅವರು ಪ್ರಶ್ನಿಸಿದ್ದ ಮಕ್ಕಳು ಓದುತ್ತಿರುವುದಾಗಿ ನೀಡಿದ್ದ ಅರ್ಜಿ ಸುಳ್ಳೆಂಬು ದಾಗಿ ನೀಡಿರುವ ಬಗ್ಗೆ ವಿಚಾರಣೆ ನಡೆಸಿ ಒಂದು ತಿಂಗಳೊಳಗೆ ಉಚ್ಚನ್ಯಾಯಾಲಯಕ್ಕೆ ತಿಳಿಸ ಬೇಕೆಂದು ಸರಕಾರಕ್ಕೆ ತಿಳಿಸಿದ್ದು ಎರಡು ತಿಂಗಳಾದರೂ ಬರವಣಿಗೆಯಲ್ಲಿ ಸರಕಾರದಿಂದ ಉತ್ತರ ದೊರೆಯದಿದ್ದ ಪ್ರಯುಕ್ತ ಶ್ರೀ ಯೋಹನ ಅವರು ನ್ಯಾಯಾಲಯ ನಿಂದನೆಯ ಬಗ್ಗೆ ಮತ್ತೆ ಉಚ್ಚನ್ಯಾಯಾಲಯಕ್ಕೆ ಪೊದಾಗ ಸರಕಾರದವರು ಅಪರ ಆರ್ಜಿಯನ್ನು ತಿರಿಸ್ಕರಿಸುವುದರಿಂದ. ನಿವೇಶನ ಪಾರಾಟದಲ್ಲಿ ಆಗಿರುವ ಅನ್ಯಾಯ. ನಿವೇಶನ ಕೊಳ್ಳಲು ಸಹಕರಿಸಿದ ಪರ ಹೆಸ್ಲೆ ಹಾಗೂ ವರ್ಗಾವಣೆ ವಿಷಯಗಳ ಬಗ್ಗೆ ಪೂರ್ಣವಾಗಿ ವಿಚಾರಣೆ ನಡೆಸಿ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ಜರುಗಿಸುವಂತೆ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ವಿಷಯ ಗೊತ್ತಿಲ್ಲ. ವರದಿ ತರಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಹೇಳುತ್ತೇನೆ.